ವರ್ಷಗಳಲ್ಲಿ ಫ್ಯಾಕ್ಟರಿಗೆ ಬರುವ ಆರ್ಡರುಗಳು ಕಡಿಮೆಯಾದವು. ಅದರೊಂದಿಗೆ ಲಾಭವು ಕಡಿಮೆಯಾಯಿತು. ಮತ್ತೊಂದು ಮೂರ್ನಾಲ್ಕು ವರ್ಷಗಳಲ್ಲಿ ಲಾಭವಿದ್ದ ಫ್ಯಾಕ್ಟರಿ ನಷ್ಟಕ್ಕೆ ತಿರುಗಿತು. ಒಂದು ಕಾಲಕ್ಕೆ 40-50 ಜನರಿಗೆ ಉದ್ಯೋಗ ಕೊಟ್ಟಿದ್ದ ಫ್ಯಾಕ್ಟರಿಯಲ್ಲಿ ಹದಿನೈದು ಜನರು ಮಾತ್ರ ಉಳಿದರು. ಕಡೆಗೆ ಕೆಲಸದವರಿಗೆ ಸರಿಯಾಗಿ ಸಂಬಳ ಕೊಡುವುದೇ ಕಷ್ಟವಾಯಿತು. ಯಾರೂ ಅಸಹಾಯಕರಲ್ಲ. ಆದರೂ ಎಲ್ಲವನ್ನೂ ನೋಡುತ್ತಾ ಏನೂ ಮಾಡಲಾಗದ ಸ್ಥಿತಿ ನನ್ನದಾಗಿತ್ತು. ಇಲ್ಲಿ ತಪ್ಪು ನನ್ನದೂ ಇದೆ. ಎಲ್ಲವೂ ಸರಿ ಇರುವಾಗ ಸ್ವಲ್ಪವಾದರೂ ಫ್ಯಾಕ್ಟರಿಯ ಕೆಲಸದ ಬಗ್ಗೆ ತಿಳಿದುಕೊಳ್ಳಬೇಕಿತ್ತು.

'ವಿದೂ... ಇದೇ ಹಳದಿ ಸೀರೆ ಉಟ್ಕೋ' ಎನ್ನುತ್ತಾ ಇಸ್ತ್ರಿ ಮಾಡಿದ ಸೀರೆಯನ್ನು ಪ್ರಭು ಕೊಟ್ಟಾಗ ಇಹಕ್ಕೆ ಬಂದೆ. 'ಇವತ್ತು ಹನ್ನೊಂದು ಗಂಟೆಯ ನಂತರ ಫ್ಯಾಕ್ಟರಿಗೆ ಹೊರಡೋಣ, ಅಷ್ಟರವರೆಗೆ ಸಮಯ ಸರಿ ಇಲ್ಲ' ಎಂದು ಹೇಳಿದ. ನಾನು ಬೆಚ್ಚಿ ಬಿದ್ದೆ. ಏನೆನ್ನಲಿ? ಎಲ್ಲಾ ಸಮಯವೂ ಒಳ್ಳೆಯದೇ ನಮ್ಮ ಗುರಿ, ನಡೆಯುವ ದಾರಿ ಸರಿ ಇರಬೇಕು ಎಂದು ಹೇಳಬೇಕೇನಿಸಿತು. ಹೇಳಿ ಪ್ರಯೋಜನವಿಲ್ಲವೆಂದು ಸುಮ್ಮನಾದೆ.

ಪ್ರಭು ಮೊದಲೆಲ್ಲ ಹೀಗಿರಲಿಲ್ಲ.

ಎಲ್ಲವೂ ಕೈತಪ್ಪಿ ಹೋಗುತ್ತಿರುವಾಗ ಪ್ರಭುವಿಗೆ ಜ್ಯೋತಿಷಿಯೊಬ್ಬ ಗಂಟು ಬಿದ್ದ. ಯಾರೋ ಮಾಟ ಮಾಡಿದ್ದಾರೆಂದು ಆ ಪೂಜೆ, ಈ ಪೂಜೆ ಮಾಡಿಸಿದ. ಕಡೆಗೆ ಕೆಂಪು ಬಣ್ಣದಿಂದ ದೂರವಿರಿ, ಅದರಿಂದಲೇ ತೊಂದರೆ ಬರುತ್ತಿರುವುದು, ಕೆಂಪು ಬಣ್ಣದಿಂದ ನಿಮ್ಮ ಪ್ರಾಣಕ್ಕೆ ಸಂಚಕಾರ ಬರುವ ಸಾಧ್ಯತೆಯೂ ಇದೆ ಎಂದು ಸಲಹೆ ಮಾಡಿದರು. ಅಲ್ಲಿಂದ ತಾಪತ್ರಯ ಇನ್ನೂ ಜಾಸ್ತಿಯಾಯಿತು, ಮನೆಯಲ್ಲಿ ಹೆಂಡತಿ, ಮಕ್ಕಳು ಕೆಂಪು ಬಟ್ಟೆ ಧರಿಸುವಂತಿಲ್ಲ. ಫ್ಯಾಕ್ಟರಿಯಲ್ಲೂ ಯಾರೂ ಕೆಂಪು ಬಣ್ಣದ ಉಡುಗೆ ಧರಿಸಬಾರದೆಂದು ಆರ್ಡರ್ ಹೊರಡಿಸಿದ. ಪ್ರಭುವಿನ ಕೆಂಪು ದ್ವೇಷ ಅಲ್ಲಿಗೇ ನಿಲ್ಲಲಿಲ್ಲ. ಯಾರೂ ಇಲ್ಲದಾಗ ಕಪಾಟಿನಲ್ಲಿದ್ದ ಕೆಂಪು ಬಟ್ಟೆಯನ್ನೆಲ್ಲಾ ಸುಟ್ಟು ಹಾಕಿದ. ಶೋಕೇಸಿನಲ್ಲಿದ್ದ ಬೊಂಬೆಗಳನ್ನೂ ಬಿಡಲಿಲ್ಲ. ಬೊಂಬೆಗಳ ಕೈ ಕಾಲನ್ನೂ ಕತ್ತರಿಸಿದ. ಕಾರಣ ಮತ್ತೇನಲ್ಲ ಅದರ ಉಗುರಿನಲ್ಲಿ ಕೆಂಪು ಬಣ್ಣವಿತ್ತು. ಮನೆಗೆ ಟೊಮೆಟೊ, ಆಪಲ್ ತರುವುದನ್ನು ನಿಲ್ಲಿಸಲಾಯಿತು. ಬುದ್ಧಿ ಹೇಳಲು ಹೊರಟರೆ 'ನಿಂಗದೆಲ್ಲಾ ಗೊತ್ತಾಗಲ್ಲ ಬಿಡು, ನೀನು ಹಳ್ಳಿಯಿಂದ ಬಂದವಳು, ಈ ಬೆಂಗಳೂರಿನಲ್ಲಿ ಎಂತೆಂತ ಜನರಿರುತ್ತಾರೆ ಗೊತ್ತಾ? ಹೊಟ್ಟೆಕಿಚ್ಚಿಗೆ ಯಾರೊ ಮಾಟ ಮಾಡಿಸಿದ್ದಾರೆ ಕಣೇ, ಅದಕ್ಕೆ ಎಲ್ಲಾನೂ ಲಾಸು. ಒಂದಾರು ತಿಂಗಳಿಗೆ ಎಲ್ಲಾ ಸರಿ ಹೋಗತ್ತೆ ಎಂದ್ರು ಜ್ಯೋತಿಷಿಗಳು'ಎಂದು ಹೇಳಿದ್ದನ್ನು ಕೇಳಿ ನನ್ನ ಬಾಯಿ ಬಂದಾಯಿತು. ಈ ಸೈಕೋ ಇನ್ನೂ ಜಾಸ್ತಿಯಾಗಿ ಎಷ್ಟೋ ರಾತ್ರಿ 'ವಿದೂ... ಅಲ್ನೋಡು ಅದೇ ಆ ಕೆಂಪು ಬಟ್ಟೆ ಹಾಕಿಕೊಂಡವ ಬರುತ್ತಿದ್ದಾನೆ, ಅವನೇ ಮಾಟ ಮಾಡಿದ್ದು' ಎನ್ನುತ್ತಾ ಕೈಗೆ ಸಿಕ್ಕಿದ ವಸ್ತುಗಳನ್ನೆಲ್ಲಾ ಎಳೆದು ಬಿಸಾಕುತ್ತಿದ್ದ. ಇದನ್ನೆಲ್ಲ ಕಂಡು ಮಕ್ಕಳೂ ಹೆದರಿಕೊಂಡರು.

ಫ್ಯಾಕ್ಟರಿಯಲ್ಲೂ ಪರಿಸ್ಥಿತಿ ಬಿಗಡಾಯಿಸಿ ಕೆಲಸದವರಿಗೆ ನಾಲ್ಕು ತಿಂಗಳು ಸಂಬಳ ಕೊಡಲಾಗಲಿಲ್ಲ. ಒಂದು ದಿನ ಆಫೀಸಿನವರು ಕೆಂಪು ಬಣ್ಣದ ಬಟ್ಟೆ ಧರಿಸಿ ಸ್ಟ್ರೈಕ್ ಮಾಡಲು ಕುಳಿತರು. ನೋಡಿದ ಪ್ರಭು ತಲೆ ತಿರುಗಿ ಬಿದ್ದ. ಎಲ್ಲವೂ ಒಂದೊಂದಾಗಿ ಕೈ ತಪ್ಪಿ ಹೋಗುತ್ತಿದೆ. ಹೀಗೇ ಇದ್ದರೆ ಫ್ಯಾಕ್ಟರಿ ಮುಚ್ಚುವ ದಿನ ದೂರವಿಲ್ಲ ಎನಿಸಿತು. ಏನಾದರೂ ಮಾಡಿ ಕೈಯಲ್ಲಿ ಇರುವುದನ್ನು ಉಳಿಸಿಕೊಳ್ಳಬೇಕು. 'ಡು ಆರ್ ಡೈ' ಎನ್ನುವ ಪರಿಸ್ಥಿತಿ. ಕವಾಟಿನಲ್ಲಿದ್ದ ಚಿನ್ನದ ಆಭರಣಗಳು ನೆನಪಾದವು. ಎಲ್ಲವನ್ನೂ ಮಾರಿ ಕೆಲಸದವರಿಗೆ ಮೊದಲು ಸಂಬಳ ಕೊಟ್ಟೆ. ಫ್ಯಾಕ್ಟರಿಯ ಆಡಳಿತವನ್ನು ಕೈಗೆತ್ತಿಕೊಂಡೆ. ಆದರೆ, ನನಗೆ ಕೆಲಸ ಮಾಡಿ ಗೊತ್ತೇ ಹೊರತು ಆಡಳಿತ ಮಾಡಿಯಲ್ಲ; ಇಲ್ಲಿ ಪಾಠ ಕಲಿಸುವವರೂ ಇಲ್ಲ. ತಪ್ಪು ಮಾಡಿಯೂ ಪಾಠ ಕಲಿಯಬಹುದು, ಆದರೆ ಪರಿಸ್ಥಿತಿ ಎಷ್ಟು ಹದಗೆಟ್ಟಿತ್ತೆಂದರೆ ಒಂದು ಸಣ್ಣ ತಪ್ಪು ಮಾಡಿದರೂ ಹೊಂಡಕ್ಕೆ ಬೀಳುವ ಪರಿಸ್ಥಿತಿ, ಎಲ್ಲವೂ ನನ್ನ ನಿರ್ಧಾರದ ಮೇಲಿದೆ. ನಿಧಾನವಾಗಿ ಆಡಳಿತದ ಒಂದೆರಡು ತಂತ್ರಗಳು ಕೈ ಹಿಡಿದವು. ಅದನ್ನೇ ಹಿಡಿದುಕೊಂಡು ಮೇಲೆ ಬರತೊಡಗಿದೆ. ಮೊದಲ ಸಲ ಪರಿಸ್ಥಿತಿ ಸುಧಾರಿಸಿ ಕೆಲಸದವರಿಗೆ ಸಂಬಳ ಕೊಡಲು ಸಾಧ್ಯವಾದಾಗ ಆದ ಸಂತೋಷ ಹೇಳತೀರದು. ಏನೋ ಸಾಧಿಸಿದ ಹೆಮ್ಮೆ. ಆದರೂ ಹೆಗಲ ಮೇಲೀನ ಜವಾಬ್ದಾರಿಯ ಭಾರ ಕಡಿಮೆಯಾಗಲಿಲ್ಲ. ಎಲ್ಲವೂ